

# ಅಂತಃಕ್ಷೇತ್ರ ಹೊಕ್ಕ ಹಿಂಸೆ...

ಎರಡಕ್ಕೂ ಅನುಸರಿಸುವ ಹಿಂಸಾ ಮಾರ್ಗ ಮತ್ತು ಒಂದಕ್ಕೊಂದು ಕೈಜೋಡಿಸಿದ್ದು ಮಾತ್ರ ವಿನಾಶಕಾರಿಯಾದದ್ದು.

ಬೆಳೆವ ಮಕ್ಕಳ ಮನದೊಳಗೂ ಇಂಥ ಹಿಂಸೆ ಮುಂದುವರಿದರೆ ಎಂಥ ಹೊಸ ನಾಗರಿಕತೆ ಹುಟ್ಟೀತು? ಒಂದು ನಂಬಿಕೆಯ ಜನಾಂಗದ ನಡುವೆ ಮತ್ತೊಂದು ನಂಬಿಕೆಯ ಜನಾಂಗ ಬಾಳಿ ಬದುಕುವುದು ಅಷ್ಟೊಂದು ದುಸ್ತರ ಯಾಕಾಗುತ್ತದೆ? ಅಂಥ ಅನಿವಾರ್ಯತೆಗಳಾದರೂ ಏನು?

ಹಿಂಸೆಯ ಇಷ್ಟು ದೊಡ್ಡ ಹರವನ್ನು ಮಕ್ಕಳ ಮುಗ್ಧ ಕಣ್ಣುಗಳ ಮೂಲಕ ಹೊಸ ಆಶಯಗಳ, ಸಾಧ್ಯತೆಗಳ ಹುಡುಕಾಟ ನಡೆಸುವ 'ಎನ್‌ಕ್ಲೇವ್' (ನಿರ್ದೇಶನ: ರಾಡೊವನೊವಿಕ್) ಸಿನಿಮಾದ ಯತ್ನ ಅತ್ಯಂತ ಮಾನವೀಯವಾಗಿದೆ.

★ ★ ★

ಹತ್ತು ಹನ್ನೆರಡು ವರ್ಷದ ಹುಡುಗ ನೆನಾದ್ (ಫಿಲಿಪ್ ಸುಬಾರಿಕ್) ಸೆರ್ಬಿಯನ್ ಕ್ರಿಶ್ಚಿಯನ್ ಕುಟುಂಬದಲ್ಲಿ ಬೆಳೆದವ. ಕೊಂಚ ಅಂತರ್ಮುಖಿ. ಅವನು ವಾಸವಾಗಿರುವ ಪ್ರದೇಶ